ಆ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿಷಯ ಸಮಿತಿ ಶಿಫಾರಸ್ಸಿನಂತೆ, ರಾಜ್ಯ ಸರ್ಕಾರವು ದಿನಾಂಕ 11-4-1996ರ ಪತ್ರ ಸಂಖ್ಯೆ ಮಮಇ 1 ಐಸಿಡಿ 96 ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಅಂಗನವಾಡಿ ಸಹಾಯಕರಿಗೆ ಹಾಲಿ ನೀಡುತ್ತಿರುವ ಸಹಾಯಧನವನ್ನು ಕ್ರಮವಾಗಿ ರೂ.1000-00 ಮತ್ತು ರೂ.500-00ಗಳಿಗೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ತೋಟಗಾರಿಕೆ ಇಲಾಖೆಯಲ್ಲಿನ ದಿನಗೂಲಿ ನೌಕರರ ಬಗ್ಗೆ

913 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದವರನ್ನು ಎರವಲು ಸೇವೆಯ ಮೇಲೆ 'ಹಾಪ್‌ಕಾಮ್ಸ್'ಗೆ ನೀಡಿರುವುದೇ ನಿಜವೇ?

ಆ) ಹಾಗಿದ್ದಲ್ಲಿ ದಿನಗೂಲಿ ನೌಕರರನ್ನು ಎರವಲು ಸೇವೆಯ ಮೇಲೆ ಕಳುಹಿಸಲು ಅವಕಾಶವಿದೆಯೇ?

ಇ) ಇವರ ಸೇವೆಯನ್ನು ಎರವಲಾಗಿ ನೀಡಲು ಸರ್ಕಾರದಿಂದ ಆದೇಶವೇನಾದರೂ ಇದೆಯೇ? ಯಾವ ನಿಯಮದಡಿಯಲ್ಲಿ ಇವರ ಸೇವೆಯನ್ನು ಎರವಲಾಗಿ ನೀಡಲಾಗಿದೆ?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು. ತೋಟಗಾರಿಕೆ ಇಲಾಖೆಯ ಮೂರು ಶೀತಲಗೃಹಗಳನ್ನು ಹಾಪ್‌ಕಾಮ್ಸ್‌ಗೆ ಗುತ್ತಿಗೆ ಆಧಾರದ ಮೇಲೆ ವರ್ಗಾಯಿಸಿದ್ದು, ಶೀತಲ ಗೃಹದಲ್ಲಿ ಕೆಲಸ ನಿರ್ವಹಿಸುತ್ತಿದ್ದ ನೌಕರರನ್ನು ಹಾಪ್‌ಕಾಮ್ಸ್ ನಿಯಂತ್ರಣಕ್ಕೆ ಒಟ್ಟು ಕೊಡಲಾಗಿದೆ.

ಆ) ಶೈತ್ಯಗಾರಗಳನ್ನು ಸೇರಿಸಿದಂತೆ ದಿನಗೂಲಿ ನೌಕರರನ್ನು ಹಾಪ್‌ಕ್ಲಾಮ್ಸ್‌ನ ನಿಯಂತ್ರಣಕ್ಕೆ ಬಿಟ್ಟುಕೊಟ್ಟಿದೆ.

ಇ) ಹಾಪ್‌ಕಾಮ್ಸ್‌ಗೆ ದಿನಗೂಲಿ ನೌಕರರನ್ನು ಬಿಟ್ಟು ಕೊಟ್ಟಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತೋಟಗಾರಿಕೆ ಇಲಾಖೆಯ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು

914 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯ ಶೀತಲ ಗೃಹದಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವ ನೌಕಕರಷ್ಟು? (ಜಿಲ್ಲಾವಾರು ವಿವರ ನೀಡುವುದು);